ಹುದ್ದೆಯ ನೇಮಕಾತಿ ಪ್ರಕ್ರಿಯೆ ಸರ್ಕಾರಿ ಆದೇಶ ಜಾರಿಗೊಳ್ಳುವ ದಿನಾಂಕಕ್ಕಿಂತ ಪೂರ್ವದಲ್ಲಿ ಪ್ರಾರಂಭವಾಗಿರುವುದರಿಂದ ಇದೇ ಆದೇಶದ ನಿಯಮ 11(3)ರ ಪ್ರಕಾರ ಕಾರ್ಯಾಗಾರ ಸಹಾಯಕ ಹುದ್ದೆಯ ನೇಮಕಾತಿ ಪ್ರಕ್ರಿಯೆಗೆ ಅನ್ವಯವಾಗದಿರುವುದರಿಂದ ನೇಮಕಾತಿ ಪ್ರಕ್ರಿಯೆ ಅಕ್ರಮವೆಂದು ಪರಿಗಣಿಸಲಾಗುವುದಿಲ್ಲ.

ಇ. ಸರ್ಕಾರಿ ಆದೇಶವನ್ನು ಉಲ್ಲಂಘಿಸಿಲ್ಲವಾದ್ದರಿಂದ ಸಂಬಂಧಿಸಿದವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ನಗರ ವ್ಯಾಪ್ತಿಯಲ್ಲಿನ ಕಾರ್ಖಾನೆಗಳ ಕಾರ್ಮಿಕರ ಬಗ್ಗೆ

934 (1053) - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೈಸೂರು ನಗರ ಹಾಗೂ ಮೈಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿನ ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ. ಕಾರ್ಮಿಕರ ಹಿತರಕ್ಷಣೆಗಾಗಿ ಸರ್ಕಾರ ಯಾವ ಯಾವ ನಿಯಮಗಳನ್ನು ಮಾಡಿದೆ?

ಇ. ಈ ನಿಯಮಗಳನ್ನು ಎಲ್ಲಾ ಕಾರ್ಖಾನೆಗಳು ಪಾಲಿಸುತ್ತಿವೆಯೇ? ಇಲ್ಲದಿದ್ದಲ್ಲಿ ಅಂತಹವುಗಳ ಮೇಲೆ ಸರ್ಕಾರದ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ. ಕಾರ್ಮಿಕರ ಸಂಖ್ಯೆ:

ಮೈಸೂರು ನಗರ - 8,668

ಮೈಸೂರು ತಾಲ್ಲೂಕು - 14,710

ಆ. ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯು ಈ ಕೆಳಕಂಡ ಕಾನೂನುಗಳನ್ನು ಜಾರಿಗೆ ತರುತ್ತದೆ.

1. ಕಾರ್ಖಾನೆ ಕಾಯ್ದೆ 1948
2. ವೇತನ ಸಂದಾಯ ಕಾಯ್ದೆ 1936
3. ಪ್ರಸೂತಿ ಸೌಲಭ್ಯ ಕಾಯ್ದೆ 1961
4. ಬಾಯ್ಲರುಗಳ ಕಾಯ್ದೆ 1923

ಮತ್ತು ಅವುಗಳ ಅಡಿಯಲ್ಲಿ ಮಾಡಲಾದ ನಿಯಮಾವಳಿಗಳು.

ಇ. ಬಹುತೇಕ ಕಾರ್ಖಾನೆಗಳು ನಿಯಮಗಳನ್ನು ಪಾಲಿಸುತ್ತಿರುವುದು ಇಲಾಖೆಯ ಗಮನದಲ್ಲಿ ಇರುತ್ತದೆ. ಪರಿವೀಕ್ಷಣೆಯ ಸಮಯದಲ್ಲಿ ಕಾನೂನಿನ ಉಲ್ಲಂಘನೆಗಳು ಕಂಡು ಬಂದಲ್ಲಿ ಉಲ್ಲಂಘನೆ ಮಾಡಿದ ಕಾರ್ಖಾನೆಯ ಮಾಲೀಕರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ.

ಬೆಂಗಳೂರು – ಮೈಸೂರು ಕಾರಿಡಾರ್ ಯೋಜನೆ

936 (1057) - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು- ಮೈಸೂರು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆ ಈಗ ಯಾವ ಹಂತದಲ್ಲಿದೆ.

ಅ. ಈ ಯೋಜನೆ ವಿಳಂಬವಾಗಲು ಕಾರಣಗಳೇನು.

ಇ. ಈ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು ಹಾಗೂ ಇವರ ಕಾಮಗಾರಿ ಪೂರ್ಣಗೊಳ್ಳುವ ವಿಚಾರದಲ್ಲಿ ಕಾಲಾವಧಿ ನಿಗಧಿಪಡಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮುಖಾಂತರ ತೆಗೆದುಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯ ಕಾರ್ಯ ಸಾಧ್ಯತೆಯ ವರದಿ ತಯಾರಿಸುವ ಕಾರ್ಯ ಮುಗಿದಿದ್ದು. ಸದ್ಯದಲ್ಲಿ ಬೆಂಗಳೂರಿನಿಂದ-ರಾಮನಗರದ ವರೆಗಿನ ರಸ್ತೆಯ ಅಭಿವೃದ್ಧಿಯನ್ನು ರೂ. 92.00 ಕೋಟಿಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮತಿ ದೊರೆತಿದೆ. ಈ ಯೋಜನೆಗಾಗಿ 21 ಎಕರೆ ಭೂಸ್ವಾಧೀನದ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಆ. ಯೋಜನಾ ವರದಿಯನ್ನು ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ.

ಇ. ಈ ಯೋಜನೆಯ ಮೊದಲನೆಯ ಪ್ಯಾಕೇಜ್ ಬೆಂಗಳೂರಿನಿಂದ-ರಾಮನಗರದ ವರೆಗಿನ ಕಾರ್ಯದ ಭೂಸ್ವಾಧೀನ ಕಾರ್ಯವು ಪ್ರಗತಿಯಲ್ಲಿದ್ದು, ನಂತರ ಈ ಕಾಮಗಾರಿಯನ್ನು 24 ತಿಂಗಳಲ್ಲಿ ಮುಗಿಸಲು ಯೋಜಿಸಲಾಗಿದೆ.

ಮೈಸೂರಿನಲ್ಲಿ ಇನ್ನಷ್ಟು ಪ್ರವಾಸಿ ತಾಣಗಳನ್ನು ಮಾಡುವುದು

937 (1060) - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೈಸೂರು ನಗರವನ್ನು ಇನ್ನಷ್ಟು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆ ಹಮ್ಮಿಕೊಂಡಿದೆ?

ಆ. ಈ ಯೋಜನೆ ವೆಚ್ಚ ವಿವರಿಸುವುದು.

ಇ. ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಿ.ಬಿ. ಇನಾಮ್‌ದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ. ಮೈಸೂರು ನಗರವನ್ನು ಇನ್ನಷ್ಟು ಆಕರ್ಷಿತ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಮೈಸೂರು ನಗರದಲ್ಲಿರುವ ಮೈಸೂರು ಅರಮನೆ ಆವರಣದಲ್ಲಿ ಸೌಂಡ್ ಅಂಡ್ ಲೈಟ್ ಷೋ ಸೌಲಭ್ಯವನ್ನು ಆಳವಡಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಆ. ಈ ಯೋಜನೆಯ ಅಂದಾಜು ವೆಚ್ಚವು ರೂ. 100.00 ಲಕ್ಷಗಳು ಇದರಲ್ಲಿ ಕೇಂದ್ರದ ಪಾಲು ರೂ. 40.00 ಲಕ್ಷಗಳು, ರಾಜ್ಯದ ಪಾಲು ರೂ. 60.00 ಲಕ್ಷಗಳು.

ಇ. ಈ ಯೋಜನೆಯ ಮೊದಲನೇ ಕಂತಿನ ಹಣ ಮೇ 2002 ರಲ್ಲಿ ಬಿಡುಗಡೆಯಾಗಿದ್ದು ಈ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದೊಂದು ವಿಶಿಷ್ಟವಾದ ಯೋಜನೆಯಾಗಿದ್ದು ಮೆ: ಮೈಸೂರು ಲ್ಯಾಂಪ್ಸ್ ಸಂಸ್ಥೆಯನ್ನು ಮುಚ್ಚಲು ಸರ್ಕಾರ ನಿರ್ಧರಿಸಿರುವುದರಿಂದ ಬೇರೆ ಸೂಕ್ತ ಖಾಸಗಿ ಸಂಸ್ಥೆ ಆಯ್ಕೆ ಮಾಡಿ ನಂತರ ಕಾರ್ಯ ಪ್ರಾರಂಭಿಸಲಾಗುವುದು.